# 9ನೇ ತರಗತಿ ಕನ್ನಡ ಪಾರಿವಾಳ ಪದ್ಯದ ನೋಟ್ಸ್- kannadapdf.com

ತರಗತಿ : 9ನೇ ತರಗತಿ

ಪದ್ಯದ ಹೆಸರು : ಪಾರಿವಾಳ

ಕೃತಿಕಾರರ ಹೆಸರು : ಸು . ರಂ . ಎಕ್ಕುಂಡಿ

## ಕೃತಿಕಾರರ ಪರಿಚಯ :



ಸು . ರಂ . ಎಕ್ಕುಂಡಿ ಇವರ ಪೂರ್ಣ ಹೆಸರು ಸುಬ್ಬಣ್ಣ ರಂಗಣ್ಣ ಎಕ್ಕುಂಡಿ . ಇವರು ಹುಟ್ಟಿದ್ದು ೧೯೨೩ ರಂದು ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ . ಇವರ ಕೃತಿಗಳು : ಕವನ ಸಂಕಲನ : ಶ್ರೀ ಆನಂದ ತೀರ್ಥರು , ಸಂತಾನ , ಹಾವಾಡಿಗರ ಹುಡುಗ , ಮತ್ಸ ಗಂಧಿ , ಬಕುಳದ ಹೂಗಳು . ಕಥಾಸಂಕಲನ : ನೆರಳು , ಕಾದಂಬರಿ : ಪ್ರತಿಬಿಂಬಗಳು . ಪ್ರಶಸ್ತಿಗಳು : ಸೋವಿಯತ್ ಲ್ಯಾಂಡ್‌ನ ನೆಹರು ಪುರಸ್ಕಾರ , ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ , ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿವೆ . ಪ್ರಸ್ತುತ ' ಪಾರಿವಾಳ ' ಪದ್ಯವನ್ನು ಸು . ರಂ . ಎಕ್ಕುಂಡಿ ಅವರ ' ಸಮಗ್ರ ಕಥನ ಕವನಗಳು ' ಎಂಬ ಕೃತಿಯಿಂದ ಆರಿಸಲಾಗಿದೆ .

## ಅ ] ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ .

**1 )** ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು **?**

ಉತ್ತರ : ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಕಿರುಚತೊಡಗಿದವು .

**2)** ಏನನ್ನು ತೊರೆದು ಬಾಳಬೇಕು **?**

ಉತ್ತರ : ವ್ಯಾಮೋಹವನ್ನು ತೊರೆದು ಬಾಳಬೇಕು .

**3 )** ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು **?**

ಉತ್ತರ : ಮುದ್ದು ಪಾರಿವಾಳಗಳ ಜೋಡಿ ದಟ್ಟಕಾಡಿನಲ್ಲಿ ಹೆಮ್ಮರದ ಪೊಟರೆಯಲ್ಲಿ ಸಂಸಾರ ಹೂಡಿತ್ತು .

**4 )** ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು **?**

ಉತ್ತರ : ಜೋಡಿ ಪಾರಿವಾಳಗಳು ಹಗಲಿರುಳು ಜೊತೆಗೂಡಿ ಬಾಳಿದವು .


| | |
|---|---|
| Download: Kannadapdf.com | https://kannadapdf.com/ |

# 9ನೇ ತರಗತಿ ಕನ್ನಡ ಪಾರಿವಾಳ ಪದ್ಯದ ನೋಟ್ಸ್- kannadapdf.com

## ಆ ] ಈ ಪ್ರಶ್ನೆಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .

**1 ) ಬೇಡ ಏನು ಮಾಡಿದನು ?**

ಉತ್ತರ : ಹಸಿದಿದ್ದ ಬೇಡನೊಬ್ಬನು ಪಾರಿವಾಳಗಳು ವಾಸವಾಗಿದ್ದ ಮರದ ಬಳಿಬಂದು ಬಲೆಯನ್ನು ಹರಡಿದನು . ಆ ಬಲೆಗೆ ಬಿದ್ದ ಪಾರಿವಾಳಗಳ ಸಂಸಾರವನ್ನು ಹೊತ್ತುಕೊಂಡು ಹೋದನು .

**2 ) ಪಾರಿವಾಳಗಳ ಆನಂದಕ್ಕೆ ಕಾರಣವೇನು ?**

ಉತ್ತರ : ಪಾರಿವಾಳವು ಇಟ್ಟ ಮೊಟ್ಟೆ ಒಡೆದು ಮರಿಗಳು ಹೊರ ಬಂದಾಗ ಅವುಗಳ ಪ್ರೀತಿ ಹೆಚ್ಚಾಯಿತು . ಪ್ರತಿನಿತ್ಯ ಆ ಮರಿಗಳ ಮಧುರವಾದ ಚಿಲಿಪಿಲಿ ಸದ್ದು ಕೇಳುತ್ತಾ ಪಾರಿವಾಳಗಳಿಗೆ ಆನಂದವಾಯಿತು .

## ಇ ] ಈ ಪ್ರಶ್ನೆಗೆ ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸಿ

**1 ) ' ಪಾರಿವಾಳ ' ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ .**

ದಟ್ಟವಾದ ಕಾಡಿನ ಹೆಮ್ಮರದ ಪೊಟರೆಯಲ್ಲಿ ಪಾರಿವಾಳಗಳ ಜೋಡಿ ವಾಸವಾಗಿದ್ದವು . ಅವು ಪರಸ್ಪರ ಒಂದನ್ನೊಂದು ಬಿಟ್ಟಿರದಷ್ಟು ಪ್ರೀತಿ ಹೊಂದಿದ್ದವು . ಒಮ್ಮೆ ಹೆಣ್ಣು ಪಾರಿವಾಳವು ಮೊಟ್ಟೆಗಳನ್ನು ಇಟ್ಟಿತು . ಆ ಮೊಟ್ಟೆಗಳು ಒಡೆದು ಹೊರಬಂದು ಚಿಲಿಪಿಲಿ ಸದ್ದು ಮಾಡುವುದನ್ನು ಕೇಳುತ್ತಾ ಪಾರಿವಾಳಗಳು ಆನಂದದಿಂದ ಬಾಳುತ್ತಿದ್ದವು . ಹೀಗಿರುವಾಗ ಒಂದು ದಿನ ಒಬ್ಬ ಬೇಡನು ಬಲೆ ಹಾಕಿದನು . ಆಟವಾಡುತ್ತಿದ್ದ ಪುಟ್ಟಮರಿಗಳು ಬೇಡನು ಹಾಕಿದ್ದ ಬಲೆಗೆ ಸಿಕ್ಕಿಬಿದ್ದವು . ಬಿಡಿಸಿಕೊಳ್ಳಲು ಕಿರುಚಾಡತೊಡಗಿದವು . ಬಲೆಗೆ ಸಿಲುಕಿದ ಪುಟ್ಟ ಮರಿಗಳನ್ನು ಕಂಡ ತಾಯಿ ಪಾರಿವಾಳ ತಾನೂ ಬಲೆಗೆ ದುಮುಕಿತು . ಹೆಣ್ಣು ಪಾರಿವಾಳವನ್ನು ಬಿಟ್ಟಿರಲಾರದ ಗಂಡುಪಾರಿವಾಳವು ಕಣ್ಣೀರಿಡುತ್ತಾ ತಾನೂ ಬಲೆಯ ಒಳಗೆ ಹೋಯಿತು . ಹೀಗೆ ಜೋಡಿ ಪಾರಿವಾಳಗಳು ಕುರುಡು ವಾತ್ಸಲ್ಯದ ಅವಿವೇಕದಿಂದ ತಾವೂ ಬಲೆಗೆ ಸಿಲುಕಿ ಬೇಡನ ಪಾಲಾದವು . ' ಮೋಹ ' ಎಂಬುದು ಸರ್ವನಾಶಕ್ಕೆ ಕಾರಣ . ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯ ಸಾಧನೆ ಮಾಡಬೇಕು ಎಂಬುದೇ ಈ ಕಥನ ಕವನದ ಆಶಯವಾಗಿದೆ .

**2 ) ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು ?**

ಉತ್ತರ : ಜೋಡಿ ಪಾರಿವಾಳಗಳು ದುಡುಕಿನಿಂದ ತಮ್ಮ ಮರಿಗಳ ಮೇಲಿನ ವ್ಯಾಮೋಹದಿಂದ ತಾವೂ ಸಹ ಬೇಡನಿಗೆ ಆಹಾರವಾದದ್ದು ಸರಿಯಲ್ಲ . ತಮ್ಮ ಮರಿಗಳು ಬಲೆಗೆ ಸಿಕ್ಕಿಕೊಂಡದನ್ನು ನೋಡಿದ ಹೆಣ್ಣು ಪಾರಿವಾಳ ವಿವೇಚನೆಯಿಲ್ಲದೆ ಮರಿಗಳ ಮೇಲಿನ ಅತಿಯಾದ ವಾತ್ಸಲ್ಯದಿಂದ ತಾನೂ ಬಲೆಗೆ ಸಿಕ್ಕಿಕೊಂಡಿತು . ಹೆಣ್ಣು ಪಾರಿವಾಳವನ್ನು ಬಿಟ್ಟಿರದಷ್ಟು ಹಚ್ಚಿಕೊಂಡಿದ್ದ ಗಂಡು ಪಾರಿವಾಳವು ತಾನೂ ಕೂಡ ಬಲೆಗೆ ಸಿಕ್ಕಿಕೊಂಡಿತು . ಹೀಗೆ ಜೋಡಿ ಪಾರಿವಾಳಗಳು ಅತಿಯಾದ ವ್ಯಾಮೋಹದಿಂದ ಪ್ರಾಣ ಕಳೆದುಕೊಂಡವು . ಸಾಧ್ಯವಾದರೆ ತಮ್ಮನ್ನೂ ರಕ್ಷಿಸಿಕೊಂಡು ಮರಿಗಳನ್ನು ಕಾಪಾಡಲು ಯೋಚಿಸಬಹುದಿತ್ತು . ಸಾಧ್ಯವಾಗದಿದ್ದರೆ ತಾವಾದರೂ ಬದುಕಬಹುದಿತ್ತು . ಆದ್ದರಿಂದ ವ್ಯಾಮೋಹ ಒಳ್ಳೆಯದಲ್ಲ ಎಂದು ಹೇಳಬಹುದು .

| Download: Kannadapdf.com | https://kannadapdf.com/ |
| --- | --- |

# 9ನೇ ತರಗತಿ ಕನ್ನಡ ಪಾರಿವಾಳ ಪದ್ಯದ ನೋಟ್ಸ್- kannadapdf.com

## ಈ) ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ .

**1 ) " ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ "**

ಉತ್ತರ : - ಆಯ್ಕೆ : ಈ ವಾಕ್ಯವನ್ನು ಸು.ರಂ.ಎಕ್ಕುಂಡಿ ಅವರ ' ಸಮಗ್ರ ಕಥನ ಕವನಗಳು ' ಎಂಬ ಕೃತಿಯಿಂದ ತೆಗೆದುಕೊಳ್ಳಲಾಗಿರುವ ' ಪಾರಿವಾಳ ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ . ಸಂದರ್ಭ : ಜೋಡಿ ಪಾರಿವಾಳಗಳು ಮರಿಗಳ ಮೇಲಿನ ಕುರುಡು ವಾತ್ಸಲ್ಯದ ಅವಿವೇಕದಿಂದ ತಾವೂ ಬಲೆಗೆ ಸಿಲುಕಿ ಬೇಡನ ಪಾಲಾದವು . ' ಮೋಹ ' ಎಂಬುದು ಸರ್ವನಾಶಕ್ಕೆ ಕಾರಣ ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ .

ಸ್ವಾರಸ್ಯ : ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು . ಅತಿಯಾದ ವ್ಯಾಮೋಹ ಒಳ್ಳೆಯದಲ್ಲ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ .

**2 ) " ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ "**

ಉತ್ತರ : - ಆಯ್ಕೆ : ಈ ವಾಕ್ಯವನ್ನು ಸು.ರಂ.ಎಕ್ಕುಂಡಿ ಅವರ ' ಸಮಗ್ರ ಕಥನ ಕವನಗಳು ' ಎಂಬ ಕೃತಿಯಿಂದ ತೆಗೆದುಕೊಳ್ಳಲಾಗಿರುವ ' ಪಾರಿವಾಳ ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ . ಸಂದರ್ಭ : ಪಾರಿವಾಳಗಳ ಪುಟ್ಟಮರಿಗಳು ಬೇಡನ ಬಲೆಗೆ ಸಿಕ್ಕಿಬಿದ್ದವು . ಬಿಡಿಸಿಕೊಳ್ಳಲು ಕಿರುಚಾಡತೊಡಗಿದವು . ಬಲೆಗೆ ಸಿಲುಕಿದ ಪುಟ್ಟ ಮರಿಗಳನ್ನು ಕಂಡ ತಾಯಿ ಪಾರಿವಾಳ ತಾನೂ ಬಲೆಗೆ ದುಮುಕಿತು . ಹೆಣ್ಣು ಪಾರಿವಾಳವನ್ನು ಬಿಟ್ಟಿರಲಾರದ ಗಂಡುಪಾರಿವಾಳವು ಕಣ್ಣೀರಿಡುತ್ತಾ ತಾನೂ ಬಲೆಯ ಒಳಗೆ ಹೋಯಿತು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ .

ಸ್ವಾರಸ್ಯ : ಜೋಡಿ ಪಾರಿವಾಳಗಳ ಕುರುಡು ವಾತ್ಸಲ್ಯವು ಇಲ್ಲಿ ಸ್ವಾರಸ್ಯವಾಗಿ ಮೂಡಿಬಂದಿದೆ .

## ಭಾಷಾ ಚಟುವಟಿಕೆ

**1 .ರೂಪಕಾಲಂಕಾರವನ್ನು ನಿದರ್ಶನದ ಮೂಲಕ ವಿವರಿಸಿ**

ಲಕ್ಷಣ : ಉಪಮೇಯ , ಉಪಮಾಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ

ಉದಾ : ಸೀತೆಯ ಮುಖ ಕಮಲ ಅರಳಿತು

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಅಲಂಕಾರ : ರೂಪಕಾಲಂಕಾರ

ಸಮನ್ವಯ : ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ರೂಪಿಸಿದೆ ಹಾಗಾಗಿ ಸಮನ್ವಯ ಇದು ರೂಪಕಾಲಂಕಾರ

**2 , "ಸಾವಿತ್ರಿಯ ಮುಖಕಮಲ ಅರಳಿತು" ಇಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಿಸಿರಿ**

ಲಕ್ಷಣ : ಉಪಮೇಯ, ಉಪಮಾನಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ ,

ಉಪಮೇಯ : ಸಾವಿತ್ರಿಯ ಮುಖ

ಉಪಮಾನ : ಕಮಲ

ಅಲಂಕಾರ : ರೂಪಕಾಲಂಕಾರ

ಸಮನ್ವಯ : ಉಪಮೇಯವಾದ ಸಾವಿತ್ರಿಯ ಮುಖವನ್ನು ಉಪಮಾನವಾದ ಕಮಲ ಕ್ಕೆ ಅಭೇದವಾಗಿ ರೂಪಿಸಿದೆ . ಹಾಗಾಗಿ ಇದು ರೂಪಕಾಲಂಕಾರ

**3,** "ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ"

ಲಕ್ಷಣ : ಉಪಮೇಯ , ಉಪಮಾಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ

ಉಪಮೇಯ : ವಿದ್ಯಾರ್ಥಿ

ಉಪಮಾನ : ರತ್ನ

ಅಲಂಕಾರ : ರೂಪಕಾಲಂಕಾರ

ಸಮನ್ವಯ : ಉಪಮೇಯವಾದ ವಿದ್ಯಾರ್ಥಿಯನ್ನು ಉಪಮಾನವಾದ ರತ್ನ ಕ್ಕೆ ಅಭೇದವಾಗಿ ರೂಪಿಸಿದೆ . ಹಾಗಾಗಿ ಇದು ರೂಪಕಾಲಂಕಾರ ,,

**4,** " ಮನೆಯೇ ಧರ್ಮಾಶ್ರಮ "

ಲಕ್ಷಣ : ಉಪಮೇಯ , ಉಪಮಾಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ

ಉಪಮೇಯ : ಮನೆ

ಉಪಮಾನ : ಧರ್ಮಾಶ್ರಮ

ಅಲಂಕಾರ : ರೂಪಕಾಲಂಕಾರ

ಸಮನ್ವಯ : ಉಪಮೇಯವಾದ ಮನೆಯನ್ನು ಉಪಮಾನವಾದ ಧರ್ಮಾಶ್ರಮಕ್ಕೆ ಅಭೇದವಾಗಿ ರೂಪಿಸಿದೆ ಹಾಗಾಗಿ ಇದು ರೂಪಕಾಲಂಕಾರ

**5.** ' ಪಾರಿವಾಳ ' ಪದ್ಯದಲ್ಲಿರುವ ಅಂತ್ಯಪ್ರಾಸ ಪದಗಳನ್ನು ಪಟ್ಟಿಮಾಡಿ **.**

kannadaPdf.com

# 9ನೇ ತರಗತಿ ಕನ್ನಡ ಪಾರಿವಾಳ ಪದ್ಯದ ನೋಟ್ಸ್- kannadapdf.com

ಹೂಡಿ – ಜೋಡಿ

ಒಂದನೊಂದು – ಬಂದು

ಕೇಳಿ – ಬಾಳಿ

ಸೆರೆಗೆ – ಹೊರಗೆ

ಹಕ್ಕಿ – ಬಿಕ್ಕಿ

ಹಿಂಡು – ಕೊಂಡು

ಬಾಳಬೇಕು – ತಾಳಬೇಕು

KannadaPdf.com


| | |
|---|---|
| Download: Kannadapdf.com | https://kannadapdf.com/ |